ಇದಲ್ಲದೆ Clean India Campaign ಅಡಿಯಲ್ಲಿ ಪ್ರಸಿದ್ಧ ಕಂಪನಿಗಳಿಂದ ಕಾರ್ಪೊರೇಟ್ ವಲಯದ ಸಾಮಾಜಿಕ ಜವಾಬ್ದಾರಿ ಯೋಜನೆಯಡಿಯಲ್ಲಿ (Corporate Social Responsibility) ಪ್ರವಾಸಿ ತಾಣಗಳಲ್ಲಿ ಶೌಚಾಲಯ ಮತ್ತು ಇತರೆ ಶುಚಿತ್ವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮೆ॥ ಜಿಂದಾಲ್, ಮೆ॥ ಐ ಓ.ಸಿ.ಎಲ್. ಮೆ॥ ಗೈಲ್ ಮುಂತಾದ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದೆ

ಕರ್ನಾಟಕ ದರ್ಶನ ಯೋಜನೆ

400(602); ಶ್ರೀ ರವಿ ಸುಬ್ರಹ್ಮಣ್ಯ ಎಲ್.ಎ. (ಬಸವನಗುಡಿ)

ಅ) ಕರ್ನಾಟಕ ದರ್ಶನ ಯೋಜನೆ ಅನ್ವಯ ರಾಜ್ಯದ ಸರ್ಕಾರಿ ಶಾಲೆಯ ಯಾವ ತರಗತಿಯ ಮಕ್ಕಳನ್ನು ಪ್ರವಾಸಕ್ಕೆ ಕರೆದೊಯ್ಯಲಾಗುವುದು; ಈ ಸಂಬಂಧದ ಸರ್ಕಾರಿ ಆದೇಶದ ಪ್ರತಿಯನ್ನು ಒದಗಿಸುವುದು,

ಆ) 'ಕರ್ನಾಟಕ ದರ್ಶನ' ಯೋಜನೆಯಡಿಯಲ್ಲಿ ಯಾವ ಯಾವ ಪ್ರವಾಸಿ ತಾಣಗಳಿಗೆ ಕರೆದೊಯ್ಯಲಾಗುವುದು; ಯೋಜನೆಯ 'Tour Plan' ಒದಗಿಸುವುದು;

ಇ) ಈ ಯೋಜನೆಯ ಅನ್ವಯ ಪ್ರತಿ ವಿದ್ಯಾರ್ಥಿಗೆ ತಗಲುವ ವೆಚ್ಚ ಎಷ್ಟು,

ಈ) ಕೇವಲ ಅಹಿಂದ ಮಕ್ಕಳಿಗೆ ಸೀಮಿತವಾಗಿರುವ ಈ ಯೋಜನೆ, ಇತರ ಮಕ್ಕಳ ಮನೋಭಾವನೆಯ ಮೇಲೆ ಋಣಾತ್ಮಕ ಪರಿಣಾಮ ಬೀರುವುದುರಿಂದ ಪ್ರಸ್ತುತ ಆದೇಶವನ್ನು ಹಿಂಪಡೆದು, ಈ ಯೋಜನೆಯನ್ನು ಎಲ್ಲಾ ವರ್ಗದ ಮಕ್ಕಳಿಗೂ ವಿಸ್ತರಿಸಿ, ಸಮಾನ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 8,9 ಮತ್ತು 10ನೇ ತರಗತಿಗಳಲ್ಲಿ ಕಲಿಯುತ್ತಿರುವ ಎಲ್ಲಾ ವರ್ಗಕ್ಕೆ ಸೇರಿದ ಮಕ್ಕಳನ್ನು ಕರ್ನಾಟಕ ದರ್ಶನ ಪ್ರವಾಸಕ್ಕೆ ಕರೆದೊಯ್ಯಲಾಗುವುದು. ಸರ್ಕಾರಿ ಆದೇಶದ ಪ್ರತಿಲಗತ್ತಿಸಿದೆ

ಆ) ಈ ಯೋಜನೆ ಅನ್ವಯ ಉತ್ತರ ಕರ್ನಾಟಕ ಭಾಗದ ಮಕ್ಕಳನ್ನು ದಕ್ಷಿಣ ಕರ್ನಾಟಕ ಭಾಗದ ಪ್ರವಾಸಿ ತಾಣಗಳಿಗೆ ಹಾಗೂ ದಕ್ಷಿಣ ಕರ್ನಾಟಕ ಭಾಗದ ಮಕ್ಕಳನ್ನು ಉತ್ತರ ಕರ್ನಾಟಕ ಭಾಗದ ಪ್ರವಾಸಿ ತಾಣಗಳಿಗೆ ಪ್ರವಾಸ ಏರ್ಪಡಿಸಲಾಗುವುದು ಪ್ರವಾಸ ಕಾರ್ಯಕ್ರಮಗಳನ್ನು ಜಿಲ್ಲಾ ಪಂಚಾಯಿತಿಗಳು ಶಿಕ್ಷಣ ಇಲಾಖೆ ಸಹಯೋಗದೊಂದಿಗೆ ರೂಪಿಸುತ್ತವೆ.

ಇ) ಈ ಯೋಜನೆ ಅನ್ವಯ ಪ್ರತಿ ವಿದ್ಯಾರ್ಥಿಗೆ ತಗಲುವ ವೆಚ್ಚ ₹ 3500

ಈ) ಯೋಜನೆಯನ್ನು ಎಲ್ಲಾ ವರ್ಗಕ್ಕೆ ಸೇರಿದ ಮಕ್ಕಳಿಗೆ ಒದಗಿಸಲಾಗಿದೆ.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:– 2013–14ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳಲ್ಲಿ 8, 9 ಹಾಗೂ 10ನೇ ತರಗತಿಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಪ್ರವಾಸ ಕೈಗೊಳ್ಳಲು ಮಂಜೂರಾತಿ.

ಓದಲಾಗಿದೆ:– 1. 2013–14ನೇ ಸಾಲಿನ ಆಯವ್ಯಯದ ಭಾಷಣದ ಘೋಷಣೆ

2. ಸರ್ಕಾರದ ಆದೇಶ ಸಂಖ್ಯೆ: ಪ್ರಇ/140/ಪ್ರವಾಯೋ/ 2013, ದಿನಾಂಕ·7/9/2013.

3 ಸರ್ಕಾರದ ಆದೇಶ ನಂಖ್ಯೆ ಪ್ರಇ/140/ಪ್ರವಾಯೋ/ 2013, ದಿನಾಂಕ.6/11/2013.

4. ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 12/11/2013 ರಂದು ನಡೆದ ಸಭಾ ನಡವಳಿಗಳು

5. ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ರವರ ಕಡತ ಸಂಖ್ಯೆ ಪ್ರಇ/ಯೋ–1/20/2013–14, ದಿ·16/11/2013.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ 2013–14ನೇ ಸಾಲಿನಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳಿಗೆ ರಾಜ್ಯದ ಪ್ರವಾಸಿ ತಾಣಗಳ ಪರಿಚಯ ಮಾಡಿಸುವ ಉದ್ದೇಶದಿಂದ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮವನ್ನು ಆಯೋಜಿಸಲಾಗುವುದೆಂದು ಘೋಷಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ರಾಜ್ಯದ ಪ್ರತಿ ಜಿಲ್ಲೆಗಳಿಂದ 300 ವಿದ್ಯಾರ್ಥಿಗಳಂತೆ 30 ಜಿಲ್ಲೆಗಳಿಂದ 9000 ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳಿಗೆ 2013–14ನೇ ಸಾಲಿನ ಆಯವ್ಯಯದ ವಿಶೇಷ ಅಭಿವೃದ್ಧಿ ಯೋಜನೆ ಲೆಕ್ಕಶೀರ್ಷಿಕೆ 3452–80–104–0–01–133 (ಯೋಜನೆ) ಇದರಡಿ ಒದಗಿಸಿರುವ ₹ 15 00 ಕೋಟಿಗಳ ಅನುದಾನದಲ್ಲಿ ₹ 3 15 ಕೋಟಿ ವೆಚ್ಚದಲ್ಲಿ 114 ಹಿಂದುಳಿದ ತಾಲ್ಲೂಕುಗಳಲ್ಲಿನ ವಿದ್ಯಾರ್ಥಿಗಳಿಗೆ ಹಾಗೂ ಇನ್ನುಳಿದ ತಾಲ್ಲೂಕುಗಳಲ್ಲಿನ ವಿದ್ಯಾರ್ಥಿಗಳ ಪ್ರವಾಸಕ್ಕೆ ತಗಲುವ ವೆಚ್ಚವನ್ನು 2013–14ನೇ ಸಾಲಿಗೆ ಇಲಾಖೆಗೆ ಒದಗಿಸಿರುವ ಅನುದಾನದಲ್ಲಿ ಭರಿಸಿ ಕರ್ನಾಟಕ ದರ್ಶನ ಪ್ರವಾಸ ಕೈಗೊಳ್ಳಲು ಸರ್ಕಾರದ ಮಂಜೂರಾತಿ ನೀಡಲಾಗಿದೆ

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:12/11/2013 ರಂದು ನಡೆದ ಸಭೆಯಲ್ಲಿ ಈ ಯೋಜನೆಯನ್ನು ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಮಕ್ಕಳಿಗಷ್ಟೇ ಅಲ್ಲದೆ, ಈ ಯೋಜನೆಯನ್ನು ಇತರ ಎಲ್ಲಾ ವರ್ಗದ ಮಕ್ಕಳಿಗೂ ವಿಸ್ತರಿಸುವಂತೆ ನಿರ್ಣಯಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಕಡತದಲ್ಲಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ರವರು ದಿನಾಂಕ:12/11/2013 ರಂದು ಮಾನ್ಯ

ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಯೋಜನೆಯನ್ನು ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಮಕ್ಕಳಿಗಷ್ಟೇ ಅಲ್ಲದೆ, ಈ ಯೋಜನೆಯನ್ನು ಇತರ ಎಲ್ಲಾ ವರ್ಗದ ಮಕ್ಕಳಿಗೂ ವಿಸ್ತರಿಸಲು ಸೂಚಿಸಿರುವುದರ ಮೇರೆಗೆ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸುತ್ತಾರೆ. ಪರಿಷ್ಕೃತ ಪ್ರಸ್ತಾವನೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ತಲಾ 450 ಮಕ್ಕಳನ್ನು ಅಂದರೆ 30 ಜಿಲ್ಲೆಗಳಿಂದ ಒಟ್ಟು 13500 ಮಕ್ಕಳನ್ನು ಕರ್ನಾಟಕ ದರ್ಶನ ಪ್ರವಾಸ ಮಾಡಿಸಲು ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ. ಒಬ್ಬ ವಿದ್ಯಾರ್ಥಿಗೆ ₹ 3500/–ಗಳಂತೆ 13500 ಮಕ್ಕಳಿಗೆ ಒಟ್ಟು ₹ 4,72,50,000/–ಗಳ ವೆಚ್ಚವಾಗುತ್ತದೆಂದು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಶೀಲಿಸಿ ಕೆಳಕಂಡಂತೆ ಪರಿಷ್ಕೃತ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಪ್ರಇ/140/ಪ್ರವಾಯೋ/2013

ಬೆಂಗಳೂರು, ದಿನಾಂಕ: 16/11/2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಮ ಸಂಖ್ಯೆಯ ದಿನಾಂಕ 06–11–2013ರ ಸರ್ಕಾರಿ ಆದೇಶವನ್ನು ಪರಿಷ್ಕರಿಸಲಾಗಿದೆ.

2013–14ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿನ ಸರ್ಕಾರಿ ಶಾಲೆಗಳಲ್ಲಿ 8, 9 ಮತ್ತು 10ನೇ ತರಗತಿಗಳಲ್ಲಿ ಕಲಿಯುತ್ತಿರುವ ಎಲ್ಲಾ ವರ್ಗಕ್ಕೆ ಸೇರಿದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸಾರಿಗೆ, ಊಟ, ವಸತಿ ಇತರೆ ಸಾಮಗ್ರಿಗಳನ್ನು ಒದಗಿಸಿ ನಾಲ್ಕು ದಿನಗಳ ಪ್ರವಾಸವನ್ನು ಪ್ರತಿ ವಿದ್ಯಾರ್ಥಿ ₹ 3500/–ಗಳಂತೆ 30 ಜಿಲ್ಲೆಗಳಿಂದ ಒಟ್ಟು 13500 ಮಕ್ಕಳಿಗೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ–1 ರಲ್ಲಿ ಹಂಚಿಕೆ ಮಾಡಿರುವ ಜಿಲ್ಲಾವಾರು ಆಯವ್ಯಯ, ಗುರಿ ಹಾಗೂ ಅನುಷ್ಠಾನಾಧಿಕಾರಿಗಳ ಮೂಲಕ ಹಾಗೂ ಅನುಬಂಧ–2 ರಲ್ಲಿರುವ ಮಾರ್ಗಸೂಚಿಗಳನ್ನು ಅನುಸರಿಸಿ ಕರ್ನಾಟಕ

ದರ್ಶನ ಪ್ರವಾಸ ಆಯೋಜಿಸಲು ಒಟ್ಟು ₹ 4,72,50,000/–ಗಳನ್ನು (₹ ನಾಲ್ಕು ಕೋಟಿ ಎಪ್ಪತ್ತೆರಡು ಲಕ್ಷದ ಐವತ್ತು ಸಾವಿರ ಮಾತ್ರ) ಜಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ

ಮೇಲ್ಕಂಡ ವೆಚ್ಚವನ್ನು ಲೆಕ್ಕಶೀರ್ಷಿಕೆ ಸಂಖ್ಯೆ. 3452–80–104–0–01–133 ವಿಶೇಷ ಅಭಿವೃದ್ಧಿ ಯೋಜನೆ (ಯೋಜನೆ) ಹಾಗೂ ಲೆಕ್ಕ ಶೀರ್ಷಿಕೆ ಸಂಖ್ಯೆ. 3452–01–101–0–01–059 ಇತರೆ ವೆಚ್ಚಗಳು (ಯೋಜನೆ), ಇವುಗಳಡಿಯಲ್ಲಿ 2013–14ನೇ ಸಾಲಿನಲ್ಲಿ ಒದಗಿಸಲಾಗಿರುವ ಅನುದಾನದಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
(ಮೋಹನ್.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಅನುಬಂಧ-1

ಕ್ರ ಸಂ	ಜಿಲ್ಲೆಯ ಹೆಸರು	ಒಟ್ಟು ಹಂಚಿಕೆ		ಅನುಷ್ಠಾನ ಅಧಿಕಾರಿಗಳು
		ಅಭ್ಯರ್ಥಿಗಳ ಹಂಚಿಕೆ	ಅನುದಾನ ಹಂಚಿಕೆ (₹ ಲಕ್ಷಗಳಲ್ಲಿ)	
1	ಬಂಗಳೂರು (ನ)	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್,ಬಂಗಳೂರು ನಗರ
2	ಬಂಗಳೂರು (ಗ್ರಾ)	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ
3	ರಾಮನಗರ	450	15 75	ಮುಖ್ಯ ಕಾರ್ಯನಿರ್ವಹಣಾದಿಕಾರಿಗಳು, ಜಿಲ್ಲಾ ಪಂಚಾಯತ್, ರಾಮನಗರ
4	ಚಿತ್ರದುರ್ಗ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್,ಚಿತ್ರದುರ್ಗ
5	ದಾವಣಗೆರೆ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ದಾವಣಗೆರೆ
6	ಕೋಲಾರ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಕೋಲಾರ
7	ಚಿಕ್ಕಬಳ್ಳಾಪುರ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
8	ಶಿವಮೊಗ್ಗ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್,ಶಿವಮೊಗ್ಗ

9	ತುಮಕೂರು	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು
10	ಚಿಕ್ಕಮಗಳೂರು	450	15 75	ಮುಖ್ಯ ಕಾರ್ಯನಿರ್ವಹಣಾದಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು
11	ಹಾಸನ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ
12	ಮಂಡ್ಯ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ
13	ಮೈಸೂರು	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು
14	ಚಾಮರಾಜನಗರ	450	15 75	ಮುಖ್ಯ ಕಾರ್ಯನಿರ್ವಹಣಾದಿಕಾರಿಗಳು ಜಿಲ್ಲಾ ಪಂಚಾಯತ್, ಚಾಮರಾಜನಗರ
15	ಬೆಳಗಾವಿ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ
16	ಬಿಜಾಪುರ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಿಜಾಪುರ
17	ಬಾಗಲಕೋಟೆ	450	15 75	ಮುಖ್ಯ ಕಾರ್ಯನಿರ್ವಹಣಾದಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ
18	ಧಾರವಾಡ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ

19	ಗದಗ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಗದಗ
20	ಹಾವೇರಿ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾವೇರಿ
21	ಉತ್ತರ ಕನ್ನಡ	450	15 75	ಮುಖ್ಯ ಕಾರ್ಯನಿರ್ವಹಣಾದಿಕಾರಿಗಳು, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ
22	ಬಳ್ಳಾರಿ	450	15 75	ಮುಖ್ಯ ಕಾರ್ಯನಿರ್ವಹಣಾದಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ
23	ಬೀದರ್	450	15 75	ಮುಖ್ಯ ಕಾರ್ಯನಿರ್ವಹಣಾದಿಕಾರಿಗಳು ಪಂಚಾಯತ್, ಬೀದರ್
24	ಗುಲ್ಬರ್ಗಾ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪಂಚಾಯತ್, ಗುಲ್ಬರ್ಗಾ
25	ಯಾದಗಿರಿ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪಂಚಾಯತ್, ಯಾದಗಿರಿ
26	ರಾಯಚೂರು	450	15 75	ಮುಖ್ಯ ಕಾರ್ಯನಿರ್ವಹಣಾದಿಕಾರಿಗಳು ಪಂಚಾಯತ್, ರಾಯಚೂರು

27	ಕೊಪ್ಪಳ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪಂಚಾಯತ್, ಕೊಪ್ಪಳ
28	ಕೂಡಗು	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪಂಚಾಯತ್, ಕೊಡಗು
29	ಉಡುಪಿ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪಂಚಾಯತ್, ಉಡುಪಿ
30	ದಕ್ಷಿಣ ಕನ್ನಡ	450	15 75	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪಂಚಾಯತ್, ದಕ್ಷಿಣ ಕನ್ನಡ
	ಒಟ್ಟು	**13500**	**472 50**	

[ಮೋಹನ್ ಕೆ]
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಅನುಬಂಧ–2

2013–14ನೇ ಸಾಲಿನಲ್ಲಿ ಕರ್ನಾಟಕ ದರ್ಶನ ಪ್ರವಾಸ ಕೈಗೊಳ್ಳುವ ಸಂಬಂಧ ಹೊರಡಿಸಿರುವ ಮಾರ್ಗಸೂಚಿಗಳು

ಕರ್ನಾಟಕ ದರ್ಶನದ ಸಾಮಾನ್ಯ ಉದ್ದೇಶಗಳು :–

- ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಪರಿಪೂರ್ಣವಾಗಿ ರಾಜ್ಯದಲ್ಲಿರುವ ಮುಖ್ಯವಾದ ಪ್ರವಾಸಿ ಸ್ಥಳಗಳು ಅಂದರೆ ಸ್ಥಳೀಯ ವೈಜ್ಞಾನಿಕ, ಧಾರ್ಮಿಕ, ಭೌಗೋಳಿಕ, ನೈಸರ್ಗಿಕ, ಐತಿಹಾಸಿಕ, ವಿಜ್ಞಾನ ಮತ್ತು ಕೈಗಾರಿಕೆಗಳು, ಉತ್ತಮ ಶಾಲೆ, ಆಕಾಶವಾಣಿ ಕೇಂದ,ಗಣಿಗಳು ಉದ್ಯಾನವನ, ಮ್ಯೂಸಿಯಂ, ಪ್ರಖ್ಯಾತ ವ್ಯಕ್ತಿಗಳು ಹುಟ್ಟಿದ ಊರು ಇತ್ಯಾದಿಯನ್ನು ಅರಿಯುವುದು.
- ಮಕ್ಕಳು ತಮ್ಮ ಶೈಕ್ಷಣಿಕ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗುವಂತೆ ಮಾರ್ಗದರ್ಶನವನ್ನು ನೀಡುವುದು.
- ಮಕ್ಕಳಲ್ಲಿ ಸಹಕಾರ, ಹೊಂದಾಣಿಕೆ, ನಾಯಕತ್ವ ಮನೋಭಾವವನ್ನು ಬೆಳೆಸುವುದು
- ಕರ್ನಾಟಕ ಸಾಂಸ್ಕೃತಿಕ ಪರಂಪರೆಯ ಅರಿವು ಹಾಗೂ ಅಭಿವೃದ್ಧಿಗೊಳಿಸುವಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು
- ಕರ್ನಾಟಕ ಸಾಮಾಜಿಕ ಸ್ಥಿತಿಗತಿಯ ಕುರಿತು ಅರಿವುಂಟು ಮಾಡುವುದು.
- ಮಕ್ಕಳಿಗೆ ನೈಜ ಪರಿಸರದ ದರ್ಶನ ಮಾಡಿಸುವುದು.
- ತರಗತಿ ಕಲಿಕೆಗೆ ಪೂರಕವಾದ ಮಾಹಿತಿ ಒದಗಿಸುವುದು.
- ಶಾಲಾ ಚಟುವಟಿಕೆಗಳನ್ನು, ಹೊರಪ್ರಪಂಚ ಹಾಗೂ ಸಮಾಜದೊಂದಿಗೆ ಸಮನ್ವಯಗೊಳಿಸುವುದು
- ಕರ್ನಾಟಕ ಐತಿಹಾಸಿಕ ವಿಷಯಗಳ ನೈಜ ಸ್ಥಿತಿಯ ದರ್ಶನ ಮಾಡಿಸುವುದು

- ಪ್ರಾದೇಶಿಕ ಮಟ್ಟದ ಜನಜೀವನ, ಭಾಷೆ, ಆಚಾರ ವಿಚಾರಗಳಲ್ಲಿನ ವೈವಿಧ್ಯತೆಯ ಅರಿವುಂಟು ಮಾಡುವುದು

ನಿರ್ದಿಷ್ಟ ಉದ್ದೇಶಗಳು :–

- ಮಕ್ಕಳ ಶಿಕ್ಷಣದಲ್ಲಿ ಆಸಕ್ತಿ ಬೆಳೆಸಿಕೊಂಡು ಪರ್ಯೇತರ ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಹೆಚ್ಚು ಉತ್ಸಾಹದಿಂದ ಭಾಗವಹಿಸುವುದು. ಮಕ್ಕಳ ಶಾಲೆಯತ್ತ ಹೆಚ್ಚು ಆಕರ್ಷಿತರಾಗಿ ಶಾಲೆ ಬಿಡುವ ಸಾಧ್ಯತೆಗಳು ಕಡಿಮೆಯಾಗುವುದು.
- ಶಾಲಾ ಮಕ್ಕಳ ರಾಜ್ಯದ ಅನೇಕ ಸ್ಥಳಗಳ ನೈಜ ಪರಿಸರ ದರ್ಶನ ಪಡೆಯಲು ಸಹಕಾರಿಯಾಗುವುದು.
- ಮಕ್ಕಳ ಕೀಳರಿಮೆ ಹೋಗಲಾಡಿಸುವುದು.
- ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವುದು
- ಮಕ್ಕಳಲ್ಲಿ ಪರ್ಯವಸ್ತುವಿನ ಸಾಮರ್ಥ್ಯಗಳ ಬೆಳೆವಣಿಗೆಗೆ ಸಹಕಾರಿಯಾಗುವುದು.
- ವಿದ್ಯಾರ್ಥಿಗಳಲ್ಲಿ ವೀಕ್ಷಣೆ, ಮೌಖಿಕ ಹಾಗೂ ಲಿಖಿತ ಕೌಶಲ್ಯಗಳ ಸಂವರ್ಧನೆ ಮಾಡುವುದು.
- ನೋಡಿ ಕಲಿಯುವುದರಿಂದ ಅನೇಕ ಪರಿಕಪಲ್ಪನೆಗಳು ಸ್ಪಷ್ಟವಾಗುವುದು
- ಮಕ್ಕಳ ಯೋಚನಾ ಶಕ್ತಿಯನ್ನು ವಿಶಾಲಗೊಳಿಸುವುದು.
- ರಾಜ್ಯದ ಸಂಸ್ಕೃತಿ, ಕಲೆ, ದೇಶಭಕ್ತಿ, ವೈಚಾರಿಕತೆ ಬಗ್ಗೆ ಅರಿವು ಮೂಡಿಸುವುದು.

ಮಕ್ಕಳಿಗೆ ಸರ್ವತೋಮುಖ ಬೆಳೆವಣಿಗೆಗೆ ಸಹಕಾರಿಯಾಗುತ್ತದೆ. ಮಕ್ಕಳ ದಾಖಲಾತಿ, ಹಾಜರಾತಿ ಉತ್ತಮವಾಗುತ್ತದೆ ಒಟ್ಟಾರೆ ಗುಣಮಟ್ಟದ ಶಿಕ್ಷಣ ನೀಡುವ ದಿಸೆಯಲ್ಲಿ ಎಲ್ಲಾ ಮಕ್ಕಳಲ್ಲಿ ಉತ್ಸಾಹ ತುಂಬುವುದಾಗಿದೆ. ಯೋಜನೆಯ ಲಾಭವು ನೇರವಾಗಿ ಮಕ್ಕಳಿಗೆ ತಲುಪುವುದರಿಂದ ಔಚಿತ್ಯಪೂರ್ಣವಾಗಿದ್ದು, ಪೋಷಕರು ಹಾಗೂ ಸಮುದಾಯದ ಸಹಕಾರವನ್ನು ಸಹ ಗಳಿಸಬಹುದಾಗಿದೆ ಎಂದು

ಅಭಿಪ್ರಾಯ ಪಟ್ಟು ಕರ್ನಾಟಕ ದರ್ಶನ ಪ್ರವಾಸ ಆಯೋಜಿಸಲು ಉದ್ದೇಶಿಸಲಾಗಿದೆ.

ಘಟಕ ವೆಚ್ಚದ ವಿವರ:-

ಪ್ರತಿ ಜಿಲ್ಲೆಯಲ್ಲಿ 450 ವಿದ್ಯಾರ್ಥಿಗಳನ್ನು ಪ್ರತಿ ತಂಡದಲ್ಲಿ 50 ವಿದ್ಯಾರ್ಥಿಗಳು 2 ಶಿಕ್ಷಕರು + ಗೈಡ್+ಗ್ರೂಪ್-ಡಿ + ಡ್ರೈವರ್+ಸಹಾಯಕರು = ಒಟ್ಟು 56 ಜನರನ್ನು ಕರೆದೊಯ್ಯಲು ತಗಲುವ ವೆಚ್ಚವನ್ನು ಈ ಕೆಳಕಂಡಂತೆ ನೀಡಲಾಗಿದೆ.

ಕ್ರಂ. ಸಂ	ವಿವರ	50+6 ವಿದ್ಯಾರ್ಥಿಗಳಿಗೆ ತಗುಲುವ ವೆಚ್ಚ (₹ ಗಳಲ್ಲಿ)	ಒಬ್ಬರಿಗೆ ತಗುಲುವ ವೆಚ್ಚ (₹ ಗಳಲ್ಲಿ)
1	**ಸಾರಿಗೆ** 1. 56 ಸೀಟ್ ಕೆ ಎಸ್ ಆರ್.ಟಿ ಸಿ. ಬಸ್ಸಿನ ಬಾಡಿಗೆ ವೆಚ್ಚ (ಪ್ರತಿ ಕಿ.ಮೀ.ಗೆ ₹ 32/-ರಂತೆ ಒಟ್ಟಾರೆ 1500 ಕಿ.ಮೀ ಗೆ+ ಡ್ರೈವರ್ ಬಾಟಾ)	48000	960
	2. ವಿಮಾ ಕಂತು (56 ಮಂದಿಗೆ ₹ 60/- ವಿಮಾ ಕಂತು)	3360	68
2	**ವಸತಿ** ಡಾರ್ಮಿಟರಿ/ರೂಮ್ (ಪ್ರತಿ ಮಕ್ಕಳಿಗೆ ₹ 150 ರಂತೆ 4 ದಿನಗಳಿಗೆ 50+5)	33000	660
3	**ಊಟ** ಉಪಹಾರ-ಭೋಜನ-ಸಂಜೆ ಟೀ/ಕಾಫಿ-ರಾತ್ರಿ ಭೋಜನ (ಪತ್ರಿ ಮಕ್ಕಳಿಗೆ ₹ 150 ರಂತೆ 4 ದಿನಗಳಿಗೆ 50+6)	33600	672

4	ಪ್ರಯಾಣ ಭತ್ಯೆ ಮತ್ತು ತುಟ್ಟಿ ಭತ್ಯೆ 1 ಗೈಡ್‌ಗೆ ಪತ್ರಿ ಪ್ರವಾಸಕ್ಕೆ ₹ 2,000/– 2. ಗ್ರೂಪ್–ಡಿ ಸಹಾಯಕರು ಪತ್ರಿ ಪ್ರವಾಸಕ್ಕೆ ₹ 2,000/–	4000	80
5	ಶಿಕ್ಷಕರ ಗೌರವಧನ –2 ಶಿಕ್ಷಕರು ಒಬ್ಬರು ಶಿಕ್ಷಕರಿಗೆ ಪತ್ರಿ ಪ್ರವಾಸಕ್ಕೆ ₹ 3000/–ರಂತೆ ಅವರು ಮುಖ್ಯ ಶಿಕ್ಷಕರಾಗಿದ್ದಲ್ಲಿ ₹ 3,500/–ಭತ್ಯೆ ನಿಗದಿಪಡಿಸಿದೆ.	6000	120
6	ವಾಹನ ನಿಲುಗಡೆ/ಟೋಲ್ ಫ್ರೀ/ಫ್ಲೆಕ್ಸ್ ಬ್ಯಾನರ್ಸ್/ದೂರವಾಣಿ ವೆಚ್ಚ	2500	50
7	ಪ್ರವೇಶ ಶುಲ್ಕ	1500	30
8	**ಲೇಖನ ಸಾಮಾಗ್ರಿ** : (2ಪುಸ್ತಕ–ಪೆನ್ಸಿಲ್–ಕಲರ್ ಪೆನ್ಸಿಲ್–ಟೋಪ್ಪಿ) (₹ 200 ರಂತೆ 50 ಮಕ್ಕಳಿಗೆ)	10000	200
9	ಪ್ರವಾಸದಲ್ಲಿ ಸ್ಪರ್ಧಾತ್ಮಕ ಕಾರ್ಯಕ್ರಮಗಳಾದ ರಸಪ್ರಶ್ನೆ–ಚಿತ್ರಕಲೆ–ಪ್ರಬಂಧ–ಚರ್ಚಾ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಣೆ	4500	90
10	ಸಮವಸ್ತ್ರ (ಟೀ–ಶರ್ಟ್) + ಟೂರ್ ಕಿಟ್ ಬ್ಯಾಗ್ (ಪತ್ರಿ ವಿದ್ಯಾರ್ಥಿಗೆ ₹ 540 ರಂತೆ 50 ವಿದ್ಯಾರ್ಥಿಗಳಿಗೆ) (ಬ್ಯಾಗ್‌ನಲ್ಲಿ ವಿದ್ಯಾರ್ಥಿ	27000	540

	ಐ.ಡಿ ಕಾರ್ಡ್+ಶಿಕ್ಷಕರ ದೂರವಾಣಿ ಸಂಖ್ಯೆ–ಬಸ್ ನಂಬರ್+ಲೇಖನ ಸಾಮಾಗ್ರಿಗಳು ಇರಬೇಕು ಈ ಬ್ಯಾಗ್ ಮೇಲೆ ಪ್ರವಾಸೋದ್ಯಮ ಇಲಾಖೆಯ ಲೋಗೋ ಹಾಕಬೇಕು)		
11	ಇತರೆ	**1540**	**30**
	ಒಟ್ಟು	**175000**	**3500**

ಮೇಲ್ಕಂಡಂತೆ 56 ಜನರನ್ನೋಳಗೊಂಡು ಪ್ರತಿ ಜಿಲ್ಲೆಯಲ್ಲೂ 450 ವಿದ್ಯಾರ್ಥಿಗಳನ್ನು ಒಟ್ಟು 9 ತಂಡಗಳಲ್ಲಿ ಪ್ರವಾಸ ಮಾಡಿಸುವುದು. ಪ್ರವಾಸದ ವೇಳೆ ಮಕ್ಕಳನ್ನು ಉತ್ತೇಜಿಸಲು ರಸಪ್ರಶ್ನೆ/ಪ್ರಬಂಧ/ಚಿತ್ರಕಲೆ/ಚರ್ಚಾ ಸ್ಪರ್ಧೆಗಳಲ್ಲಿ ಯಾವುದಾದರೂ 2 ಸ್ಪರ್ಧೆಗಳನ್ನು ಕಡ್ಡಾಯವಾಗಿ ನಡೆಸುವುದು. ಈ ಸ್ಪರ್ಧೆಗಳಲ್ಲಿ ವಿಜೇತರಾದ ಮೊದಲ ಮೂರು ವಿಜೇತರಿಗೆ ಮೊದಲನೇ ಬಹುಮಾನವಾಗಿ ₹ 1,000/–ಬೆಲೆಯ ಪುಸ್ತಕ, ಎರಡನೇ ಬಹುಮಾನ ₹ 750/–ಬೆಲೆಯ ಪುಸ್ತಕ. ಮೂರನೇ ನಗದು ಬಹುಮಾನ ₹ 500/–ಬೆಲೆಯ ಪುಸ್ತಕಗಳನ್ನು ನೀಡುವುದು. ಪ್ರವಾಸ ಮುಗಿದ ನಂತರ ವಿಜೇತರಾದ ಮಕ್ಕಳನ್ನು ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಕಛೇರಿಗೆ ಕರೆಸಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ಬಹುಮಾನಗಳನ್ನು ವಿತರಿಸುವುದು

ಮಕ್ಕಳಿಗೆ ವಿತರಿಸುವ ಟೂರ್ ಕಿಟ್‌ಬ್ಯಾಗ್‌ನಲ್ಲಿ ಕರ್ನಾಟಕ ಪ್ರವಾಸೋದ್ಯಮದ ಪ್ರವಾಸಿ ತಾಣಗಳ, ಕಲೆ ಸಂಸ್ಕೃತಿಯ ಬಗ್ಗೆ ಮಾಹಿತಿ, ಕರ್ನಾಟಕದ ಭೂಪಟ, ಫಜಲ್ಸ್, ಕ್ರಾಸ್‌ವರ್ಡ್, ಪೆನ್ಸಿಲ್, ಪೆನ್, ಟೋಪ್ಪಿ, ಟೀಶರ್ಟ್ ಇತ್ಯಾದಿ ಸಾಮಾಗ್ರಿಗಳನ್ನು ಸೇರಿಸಿ ಮಕ್ಕಳಿಗೆ ವಿತರಿಸಬೇಕು

ಕರ್ನಾಟಕ ದರ್ಶನವನ್ನು ಸೋಮವಾರದಿಂದ ಶುಕ್ರವಾರದವರೆಗೆ 4 ಹಗಲು 5 ರಾತ್ರಿ ದಿನಗಳಿಗೆ ಆಯೋಜಿಸುವುದು.

1. ಅನುಷ್ಠಾನಕ್ಕೆ ಸಂಬಂಧಿಸಿದ ಅಂಶಗಳು·

- ಜಿಲ್ಲಾ ಹಂತದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ದರ್ಶನ ಸಮನ್ವಯ ಸಮಿತಿಯನ್ನು ರಚಿಸುವುದು: ಸಮಿತಿ ಸದಸ್ಯರು ಈ ಕೆಳಗಿನಂತಿರುವುದು.
  1 ಮುಖ್ಯ ಯೋಜನಾ ಅಧಿಕಾರಿ,(ಸಿ.ಪಿ.ಓ)–ಸದಸ್ಯರು
  2. ಡಯಟ್ ಪ್ರಾಂಶುಪಾಲರು
  3. ಜಿಲ್ಲಾ ಉಪಯೋಜನಾ ಸಮನ್ವಯ ಅಧಿಕಾರಿ,
  4 ಸ ಶಿ ಅ. ಡಯಟ್‌ನ ಸಿ.ಎಂ ಡಿ.ಇ ವಿಭಾಗದ ಮುಖ್ಯಸ್ಥರು,
  5. ಆಯಾ ಜಿಲ್ಲೆಯ ಎಲ್ಲಾ ಶೈಕ್ಷಣಿಕ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು,
  6. ಎಲ್ಲಾ ತಾಲ್ಲೂಕಿನ ತಹಸೀಲ್ದಾರರು,
  7. ಕೆ.ಎಸ್.ಆರ್ ಟಿ ಸಿ. ಪತ್ರಿನಿಧಿ, ಆರ್ ಟಿ.ಓ ಪ್ರತಿನಿಧಿ,
  8. ಪ್ರಾಚ್ಯವಸ್ತು ಇಲಾಖೆಯ ಅಧಿಕಾರಿಗಳು,
  9. ಪತ್ರಿ ತಾಲ್ಲೂಕಿನಿಂದ ಒಂದು ಸ್ವಯಂ ಸೇವಾ ಸಂಘದ ಪತ್ರಿನಿಧಿ,
  10. ಜಿಲ್ಲಾ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು,
  11. ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ – ಸದಸ್ಯ ಕಾರ್ಯದರ್ಶಿಗಳು.
- ಜಿಲ್ಲೆಯ ಎಲ್ಲಾ ವಲಯಗಳ ಕರ್ನಾಟಕ ದರ್ಶನಕ್ಕೆ ಸಂಬಂಧಿಸಿದಂತೆ ತಾಲ್ಲೂಕುವಾರು ಕ್ರಿಯಾ ಯೋಜನೆಯನ್ನು ಹಾಗೂ ಮಕ್ಕಳ ಆಯ್ಕೆ ಪಟ್ಟಿಯನ್ನು ಮೇಲ್ಕಂಡ ಸಮಿತಿಯಲ್ಲಿ ಅನುಮೋದಿಸುವುದು ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಮನ್ವಯ ಕಾರ್ಯನಿರ್ವಹಿಸುವುದು.
- ಪ್ರವಾಸವನ್ನು ಉತ್ತರ ಕರ್ನಾಟಕದ ಮಕ್ಕಳಿಗೆ ದಕ್ಷಿಣ ಕರ್ನಾಟಕದ ಪ್ರವಾಸಿ ತಾಣಗಳ ದರ್ಶನ ಮಾಡಿಸುವುದು ಹಾಗೆಯೇ ದಕ್ಷಿಣ

ಕರ್ನಾಟಕದ ಮಕ್ಕಳಿಗೆ ಉತ್ತರ ಕರ್ನಾಟಕದ ಪ್ರವಾಸಿ ತಾಣಗಳ ದರ್ಶನ ಮಾಡಿಸುವುದು

ವಿದ್ಯಾರ್ಥಿಗಳನ್ನು ಹಾಗೂ ಮೇಲ್ವಿಚಾರಕರ ಆಯ್ಕೆಗೆ ಮಾನದಂಡಗಳು :–

ಮಕ್ಕಳ ಆಯ್ಕೆ:

- ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ 8, 9 ಮತ್ತು 10ನೇ ತರಗತಿಯ ಮಕ್ಕಳನ್ನು ಸದರಿ ಕಾರ್ಯಕ್ರಮಕ್ಕೆ ಆಯ್ಕೆ ಮಾಡುವುದು ಇದರಲ್ಲಿ ಹೆಣ್ಣು ಮಕ್ಕಳು ಹಾಗೂ ಗಂಡು ಮಕ್ಕಳನ್ನು ಪ್ರತ್ಯೇಕವಾಗಿ ಪ್ರವಾಸ ಮಾಡಿಸುವುದು.
- ಆರೋಗ್ಯಕರವಾಗಿರುವ ಮಕ್ಕಳನ್ನು ಆಯ್ಕೆ ಮಾಡುವುದು.
- ತಂದೆ ತಾಯಿಗಳಿಂದ ಒಪ್ಪಿಗೆ ಪತ್ರ ಪಡೆಯುವುದು.
- ಯಾವುದೇ ಸಾಂಕ್ರಾಮಿಕ ಕಾಯಿಲೆಗಳಿಂದ ಹಾಗೂ ಧೀರ್ಘಕಾಲಿಕ ಕಾಯಿಲೆಗಳಿಂದ ನರಳುತ್ತಿರುವವರನ್ನು ಕರೆತರಬಾರದು.
- ನದಿ ಮೂಲ, ನದಿ ದಂಡೆಗಳು ಮತ್ತು ಈಜು ಆಡುವಂತಹ ಕ್ರಿಯೆಗಳಲ್ಲಿ ಮಕ್ಕಳನ್ನು ನಿಷೇಧಿಸುವುದು

ಶಿಕ್ಷಕರನ್ನು ಆಯ್ಕೆ ಮಾಡಲು ನಿಗದಿಪಡಿಸಿರುವ ಮಾನದಂಡಗಳು :–

- ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ಪುರುಷ ಶಿಕ್ಷಕರು ಹಾಗೂ ಇಬ್ಬರು ಮಹಿಳಾ ಶಿಕ್ಷಕರು ತಂಡದಲ್ಲಿರಬೇಕು ಹಾಗೂ ಇವರನ್ನು ಆಯಾ ಜಿಲ್ಲೆಯ ಉಪ ನಿರ್ದೇಶಕರು (ಆಡಳಿತ), ಶಿಕ್ಷಣ ಇಲಾಖೆ ರವರು ಆಯ್ಕೆ ಮಾಡಬೇಕು.
- ಈ ಪೈಕಿ ಒಬ್ಬರು ಸ್ಕೌಟ್ಸ್ & ಗೈಡ್ಸ್ ತರಬೇತಿ ಹೊಂದಿದ ಶಿಕ್ಷಕರಾಗಿರಬೇಕು.
- ಒಬ್ಬರು ವಿಜ್ಞಾನ ಹಾಗೂ ಒಬ್ಬರು ಕಲಾ ಶಿಕ್ಷಕರಾಗಿರಬೇಕು.
- ಪ್ರಥಮ ಚಿಕಿತ್ಸೆ ಜ್ಞಾನವನ್ನು ಹೊಂದಿದರಬೇಕು.
- ಆರೋಗ್ಯವಂತೆ ಕ್ರಿಯಾಶೀಲ ಉತ್ಸಾಹ ಶಿಕ್ಷಕರಾಗಿರಬೇಕು

- 50 ವರ್ಷಕ್ಕಿಂತ ಕಡಿಮೆ ವಯೋಮಾನದವರಾಗಿರಬೇಕು.
- ಪ್ರವಾಸ ಹೋಗುವ ಸ್ಥಳದ ಪರಿಚಯವನ್ನು ಮನಗಂಡಿರಬೇಕು
- ಪತ್ರಿ ತಂಡಕ್ಕೂ ಬೇರೆ ಬೇರೆ ಶಿಕ್ಷಕರನ್ನು ಆಯ್ಕೆ ಮಾಡಬೇಕು.

ಕರ್ನಾಟಕ ದರ್ಶನ ವೇಳಾಪಟ್ಟಿ :–

1. ಕರ್ನಾಟಕ ದರ್ಶನ ಪ್ರವಾಸವನ್ನು ಮಾರ್ಚ್–2014ರೊಳಗೆ ಪೂರ್ಣಗೊಳಿಸುವುದು.
2 ಎಲ್ಲಾ ಮಕ್ಕಳಿಗೆ ಮುಂಚಿತವಾಗಿ ಪ್ರವಾಸ ವೇಳಾಪಟ್ಟಿ ಪ್ರವಾಸಿ ತಾಣಗಳ ರೂಟ್ ಮ್ಯಾಪ್ ಮತ್ತು ವಿವರಗಳನ್ನು ನೀಡುವುದು.
3. ಇಡೀ ಪ್ರವಾಸದ ಕಾರ್ಯಕ್ರಮದಲ್ಲಿ ರಾತ್ರಿ ವೇಳೆ ತಂಗುವ ವ್ಯವಸ್ಥೆಯನ್ನು ಮುಂಚಿತವಾಗಿಯೇ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು ರವರ ನೇತೃತ್ವದಲ್ಲಿ ವವ್ಯಸ್ಥೆ ಮಾಡುವುದು
4. ಎಲ್ಲಾ ಪೋಷಕರಿಗೂ ಪ್ರವಾಸಕ್ಕೆ ಹೋಗುವ ಶಿಕ್ಷಕರ ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನೀಡುವುದು
5. ಪತ್ರಿ ಬಸ್ಸಿನಲ್ಲಿ ಪ್ರಾಥಮಿಕ ಚಿಕೆತ್ಸಾ ಕಿಟ್ ಮತ್ತು ಕೆಲ ಸಾಮಾನ್ಯ ಔಷಧಿಗಳನ್ನು ಕಡ್ಡಾಯವಾಗಿ ಕೊಂಡೊಯ್ಯತಕ್ಕದ್ದು.
6. ಜಿಲ್ಲಾ ಕಛೇರಿಯಿಂದ ಕ್ರೋಢೀಕರಣ ವರದಿ, ವೆಚ್ಚದ ವಿವರ, ಪ್ರವಾಸಕ್ಕೆ ಹೊರಟ ಮಕ್ಕಳ ವಿವರ (ವರ್ಗವಾರು ಕ್ರೋಢೀಕರಣ ನೀಡುವುದು) ಹಾಗೂ ದಾಖಲೀಕರಣದ ಪತ್ರಿ ಛಾಯಾಚಿತ್ರ ಸಮೇತ ಸಲ್ಲಿಸುವುದು.
7. ಪ್ರವಾಸ ಪೂರ್ಣಗೊಂಡ 30 ದಿನಗಳೊಳಗಾಗಿ ದಾಖಲಾತಿಗಳೊಂದಿಗೆ ಅನುಪಾಲನಾ ವರದಿಯನ್ನು ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ರವರಿಗೆ ನೀಡುವುದು.

[ಮೋಹನ್ ಕೆ]

ಸರ್ಕಾರದ ಅಧೀನ ಕಾರ್ಯದರ್ಶಿ

ಪ್ರವಾಸೋದ್ಯಮ ಇಲಾಖೆ